29	ಶ್ರೀ ತುಳಸಮ್ಮ ದೇವರು, ಹೆಬ್ಬಳಲು, ತಿಪ್ಪಸಂದ್ರ ಹೋಬಳಿ
30	ಶ್ರೀ ಅಂಕಾರೇಶ್ವರ ದೇವರು, ಮಾಯಸಂದ್ರ, ತಿಪ್ಪಸಂದ್ರ ಹೋಬಳಿ
31	ಶ್ರೀ ತಿರುಮಲ ದೇವರು, ಕಲ್ಕೆರೆ, ತಿಪ್ಪಸಂದ್ರ ಹೋಬಳಿ
32	ಶ್ರೀ ಆಂಜನೇಯಸ್ವಾಮಿ, ಹೆಬ್ಬಳಲು, ತಿಪ್ಪಸಂದ್ರ ಹೋಬಳಿ
33	ಶ್ರೀ ವರದರಾಜಸ್ವಾಮಿ ದೇವರು, ಬೈಜಾಪುರ, ಕಸಬಾ ಹೋಬಳಿ
34	ಶ್ರೀ ಆಂಜನೇಯಸ್ವಾಮಿ, ದುಬ್ಬಗೊಟ್ಟಿಗೆ, ಕಸಬಾ ಹೋಬಳಿ
35	ಶ್ರೀ ಮಲ್ಲೇದೇವರು ಮತ್ತು ಭೈರೇದೇವರು, ಕಲ್ಕೆರೆ, ತಿಪ್ಪಸಂದ್ರ ಹೋಬಳಿ

ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಮುಜರಾಯಿ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (490)285
ಸದಸ್ಯರ ಹೆಸರು : ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ)
ಉತ್ತರಿಸುವ ಸಚಿವರು : (ಶ್ರೀ ಎಸ್.ಎನ್.ಕೃಷ್ಣಯ್ಯ ಶೆಟ್ಟಿ) ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನಲ್ಲಿ ನವಗ್ರಾಮ ಯೋಜನೆಗಳು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಮಂಜೂರಾದ ಗ್ರಾಮಗಳು ಹಾಗೂ ಮನೆಗಳ ಸಂಖ್ಯೆ ಎಷ್ಟು;

ನವಗ್ರಾಮ ಯೋಜನೆಯು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಒಟ್ಟು 8 ಗ್ರಾಮಗಳು ಮಂಜೂರಾಗಿದ್ದು, ಗ್ರಾಮವಾರು ಮನೆಗಳ ವಿವರ ಈ ಕೆಳಕಂಡಂತಿದೆ.

ಗ್ರಾಮ	ಮನೆಗಳ ಸಂಖ್ಯೆ
ಕಳಸ	110
ಗುರುವಿನಹಳ್ಳಿ	40
ರಟ್ಟಿಗೇರಿ	25
ಶಿರೂರ	50
ಸಂಶಿ	40
ಹಿರೇಹರಕುಣಿ	25
ಒಟ್ಟು	**290**

ಆ) ಈ ಮಂಜೂರಾತಿ ನೀಡಿರುವ ಮನೆಗಳು ಪೂರ್ಣಗೊಂಡಿರುತ್ತವೆಯೇ; ಪೂರ್ಣಗೊಂಡಿರದಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಮಂಜೂರಾದ ಆರು ಗ್ರಾಮಗಳಲ್ಲಿ 5 ಗ್ರಾಮಗಳಿಗೆ ನೀಡಲಾದ ಗುರಿಗೆ ತಕ್ಕಂತೆ ಎಲ್ಲಾ ಮನೆಗಳು ಪೂರ್ಣಗೊಂಡಿರುತ್ತವೆ. ಉಳಿದ ಒಂದು ಗ್ರಾಮವಾದ ಹಿರೇಹರಕುಣಿಗೆ 25 ಮನೆಗಳ ಗುರಿ ನೀಡಿದ್ದು, ಫಲಾನುಭವಿಗಳು ಮನೆಗಳನ್ನು ಪೂರ್ಣಗೊಳಿಸಿಕೊಳ್ಳಲು ಹೆಚ್ಚಿನ ಆಸಕ್ತಿ ತೋರದ ಕಾರಣ ಈ ಮನೆಗಳು ಪ್ರಗತಿಯಲ್ಲಿರುತ್ತವೆ.

ಮನೆಗಳ ವಿವರ ಈ ಕೆಳಗಿನಂತಿವೆ.

ಗ್ರಾಮ	ನೀಡಲಾದ ಗುರಿ	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು
ಕಳಸ	110	110	–
ಗುರುವಿನಹಳ್ಳಿ	40	40	–
ರಟ್ಟಿಗೇರಿ	25	25	–
ಶಿರೂರ	50	50	–
ಸಂಶಿ	40	40	–
ಹಿರೇಹರಕುಣಿ	25	–	25
ಒಟ್ಟು	**290**	**265**	**25**

ಇ) ನವಗ್ರಾಮಗಳನ್ನು ನಿರ್ಮಿಸಲು ಸರ್ಕಾರ ಮಂಜೂರಾತಿ ನೀಡುವುದೇ?

ಇಲ್ಲ

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ : (480)286
ಸದಸ್ಯರ ಹೆಸರು : ಶ್ರೀ ಧ್ರುವನಾರಾಯಣ್ ಆರ್ (ಕೊಳ್ಳೇಗಾಲ)
ಉತ್ತರಿಸುವ ಸಚಿವರು : (ಶ್ರೀ.ವಿಶ್ವೇಶ್ವರ ಹೆಗಡೆ ಕಾಗೇರಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ 2007–08ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾದ ಪ್ರೌಢಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2007–08ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾದ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.